ಫೋನು ಮಾಡ್ತಾಳ್ರೀ. ಮನಿಯಾಗಿನ ನಮ್ಮ ಹೆಣ್ಣುಮಕ್ಕಳು ಏನ ತಿಳಕೋಬೇಕ್ರೀ? ನಮಗೂ ಸಾಕಾಗಿ ಹೋಗೇತಿ. ನಮ್ಮ ಫ್ಯಾಕ್ಟರಿ ಸಮಸ್ಯೆಯೇ ಭಾಳ ಇರ್ತೆತ್ರೀ ನಮಗ. ಪಾಪ ಬಡವಳು ಅಂತ ಸಹಾಯ ಮಾಡಿದ್ದು ಖರೆ, ಗಂಡ ಬಿಟ್ಟಾನ, ಸಣ್ಣ ಮಗ ಅದಾನ ಅಂತ ಕೇಳ್ದಾಗೆಲ್ಲ ದುಡ್ಡು ಕೊಟ್ಟಿದ್ದು ಖರೆ. ಅದಕ್ಕೇ ಇವರ ಕೂಟ ಭಾಳ ದುಡ್ಡ ಐತಿ, ಮನೀ ಯಜಮಾನೀನ ಆದ್ರ ಅರ್ಧ ಆಸ್ತಿ ಸಿಗ್ತೇತಿ ಅಂತ ಯಾರೋ ಹೇಳಿಕೊಟ್ಟಾರ. ಇಕೀ ಐಡಿಯ ಅಲ್ಲದು, ಬ್ಯಾರೆ ಯಾರೋ ಚುಚ್ಚಿಕೊಡಾಕಹತ್ತಾರ. ಅವ್ರ ಯಾರಂತ ನಮಗ ಗೊತ್ತೇತಿ, ನಮ್ಮ ಫ್ಯಾಕ್ಟರಿ ನಾವು ಕೊಳ್ಳೋದಕ್ಕೆ ಮೊದಲು ಒಬ್ಬರು ಅಫರ್ ಇಟ್ಟಿದ್ರು. ಆಗ ಸ್ವಲ್ಪ ಹೆಚ್ಚು ದುಡ್ಡು ಕೊಟ್ಟು ನಾವು ತೊಗೊಂಡೆವು. ನಮ್ದು ಮಂದಿ ಅವ್ರೂ, ಅದಕ ಹೊಟ್ಟೆಕಿಚ್ಚಿಗ ಹೀಂಗ ಮಾಡ್ಕೋತ ಹೊಂಟಾರ ಮೇಡಂ. ಬಿಸಿನೆಸ್ ವೈರ ಅದು.' ಮೇಡಂ ಅಲ್ಲೇ ತಡೆಯುತ್ತ, 'ಅಂದರೆ ನಿಮ್ಮ ಆಸ್ತಿ ಜಗಳದಾಗ ಒಂದು ಹೆಣ್ಣಿನ್ನ ನಡೂವ ಹಾಕ್ಕೊಂಡು ಬಯಲಿಗೆಳೀಲಿಕ್ಕ ಹತ್ತಿರಿ ಅಂತಾಯ್ತು' ಅಂದಾಗ, 'ಇಕೀ ಯಾಕ ಅವರ ಮಾತ ಕೇಳಬೇಕ್ರೀ ಮೇಡಂ? ನಮ್ಮ ಕಡೆ ಸಾಕಷ್ಟು ತಿಂದಾಳ ಉಂಡಾಳ. ಈಗ ಅವರ ಕಡೆ ಆಗ್ಯಾಳ. ನಮ್ಮ ಫ್ಯಾಕ್ಟರಿ ವಿಷಯ ಒಯ್ದು ಅಲ್ಲಿ ಹೇಳ್ತಿದ್ಲು ಅಂತ ನಾವು ತೆಗೆದು ಹಾಕೆವ್ರೀ. ಕಾನ್ಫಿಡೆನ್ಸಿಯಲ್ ವಿಷಯಾ ಲೀಕ್ ಅದ್ರ ನಮಗ ಲಾಸ್ ಅಲ್ಲರೀ? ಅದ್ಕ ನಾನ ಒಂದ ಕಂಪ್ಲೆಂಟ್ ಕೊಡ್ತೇನ್ರೀ ಈಕಿಯಿಂದ ನನಗ ಭಾಳ ಮಾನಸಿಕ ಕಿರುಕುಳ ಆಗಾಕ ಹತ್ತೇತಿ ಅಂತ'.

'ನಿಮಗೂ ಅಕೀಗೂ ಮೂರು ವರ್ಷ ಬೇರೆ ಥರದ ಸಂಬಂಧ ಇತ್ತಂತಲ್ಲ, ಅದು ಪೂರ್ತಿ ಸುಳ್ಳರೀ ಅಷ್ಟು ಸ್ವಲ್ಪ ಖರೆ ಐತೋ?' ಅಂತ ಅಲ್ಲೇ ಉಪ್ಪು ಹಾಕಿ ಸಿಡಿಸಲು ನೋಡಿದರು ಡೇಸಿ. 'ಸಂಬಂಧ ಯಾಕೆ ಇಟ್ಟುಕೊಳ್ಳಿ ಮೇಡಂ? ಮನೀ ಒಳಗ ದೇವರಂತ ಹೆಂಡ್ತಿ ಅದಾಳ, ಹೀಂಗ ದಾರಿ ಮ್ಯಾಗ ಹೋಗೋರ್ನೆಲ್ಲ ನಾ ಯಾಕ ಹಚಕೊಳ್ಳಿ? ಫ್ಯಾಕ್ಟರಿ ಕೆಲಸಗೋಳು ನಮ್ಗ ಹಾಸಿಹೊದ್ಕೋಳೋಷ್ಟು ಇರ್ತೇತಿ ಮೊದ್ಲ. ಅಪ್ಪ ಹೊಡದು ಹೊರಗ ಹಾಕ್ಯಾನು, ಗಂಡನೂ ಬ್ಯಾರೆ ಮದ್ವಿ ಮಡ್ಕೊಂಡನು, ಎಲ್ಲಿಗ ಹೋಗ್ಲೀ ಅಂತ ಬಂದ ಅತ್ಲು. ಏನ ಮಾಡಬೇಕಿತ್ ನಾವರೆ, ಹೋಗ್ಲಿ ಪಾಪ ಅಂತ ಕೆಲ್ಸ ಕೊಟ್ಟಿದ್ದ ನಮ್ ತಪ್ಪಾತ್ರಿ. ಭಾಳ ಕಿಡಗೇಡಿ ಹೆಣಮಗಳರೀ. ನಮ್ಮ ಸುತ್ತ ಮುತ್ಲಿರೋ ಆರು ಜಮಾತಾದಾಗ ನಮ್ಮ ಬಗ್ಗೆ ಸುಳ್ಳಸುಳ್ಳೆ ಬರದು ಪಾಂಪ್ಲೆಟ್ ಮಾಡಿ ಹಂಚ್ಯಾಳೆ. ಖಾಜಿಯವರ ಹತ್ರ ಹೋಗಿ ನಮಗ ಮದ್ವಿ ಮಾಡಸರೀ ಅಂತ ಹಟ ಮಾಡ್ಯಾಳೆ. ಅವೆಲ್ಲಾಕ್ಕೂ ಸಾಕ್ಷಿ ಈ ಫೈಲಿನಾಗ ಐತಿ ನೋಡ್ರಿ ಮೇಡಂ. ಮೆಂಟಲ್ ಆಗ್ಯಾಳ್ರೀ ಅಕೀ. ಪಾಪ ಅಂತ ಸುಮ್ನ ಇದ್ದಷ್ಟೂ ನಮ್ಮ ಕುತ್ಗೀಗೆ ಬಂತು ನೋಡ್ರಿ ಮೇಡಂ. ದುನಿಯಾದಾಗ ನಾವ್ ತಲಿ ಎತ್ತಿ ತಿರುಗೂವಂಗಿಲ್ಲ, ಅಷ್ಟ್ ಹೊಲಸಾಟ ಮಾಡಿಟ್ಟಾಳ.' ಅವನೂ ದೊಡ್ಡ ಫೈಲೇ ತಂದಿದ್ದ. ಅದನ್ನು ತೆಗೆದಿರಿಸಿಕೊಳ್ಳುವಂತೆ ಮೇಡಂ ಶಶಿರೇಖಾಗೆ ಹೇಳಿ, ಇವರನ್ನು ಹೊರಕಳಿಸಿ ಮಾತಾಡುವ ಎಂಬಂತೆ ಸನ್ನೆ ಮಾಡುತ್ತಲೇ, 'ಆಯ್ತು, ನೀವು ಹೊರಗಿರಿ, ಕೇಸಿನ ವರದಿ ರೆಡಿಯಾದ ನಂತರ ಕೆಳಗೊಂದು ಸಹಿ ಬೇಕಾಗ್ತದೆ ನಿಮ್ಮದು' ಅನ್ನುತ್ತ ಹಮೀದನನ್ನು ಹೊರಗಟ್ಟಿದರು ಮೇಡಂ.

'ಒಟ್ಟಾರೆ ಇಬ್ಬರಿಗೂ ಸಂಬಂಧ ಏರ್ಪಟ್ಟಿದ್ದು ನಿಜ, ಆದರೆ ಇವಳು ಮದುವೆಯ ಪ್ರಸ್ತಾಪ ಎತ್ತಿದ ಕೂಡಲೆ ಅಂವ ಹಿಂದೆ ಸರಿದುಕೊಂಡಿದ್ದಾನೆ.' 'ಆದರೆ ಅಕೀ ಹಮೀದ್ ಮದುವೆಯಾದ ವ್ಯಕ್ತಿ ಅಲ್ಲ ಅಂತ ಇಂಟ್ರೆಸ್ಟ್ ತೋರಿದೆ ಅನ್ನುವುದು ಸುಳ್ಳು. ಮೂರು ವರ್ಷದಿಂದ ಅದೇ ಫ್ಯಾಕ್ಟರೀ ಒಳಗ ಕೆಲಸ ಮಾಡಿದವಳಿಗೆ ಅವನ ಜೊತೆ ಸುತ್ತಿದವಳಿಗೆ ತಮ್ಮ ಮಾಲೀಕ ವಿವಾಹಿತನೋ ಅಲ್ಲವೋ ಎಂದು ತಿಳಿಯೋದು ಕಷ್ಟವೇ?' 'ಹಮೀದ್ ಒಪ್ಪಿಕೊಳ್ಳದಿದ್ದರೂ, ಪರಸ್ಪರ ಒಪ್ಪಿಗೆ ಮೇಲೆ ಇಬ್ಬರೂ ಜೊತೆಯಲ್ಲಿದ್ದಂತೂ ಸತ್ಯ, ಆದರೆ ಮದುವೆ ಸುದ್ದಿಗೆ ನೋ ಎನ್ನುತ್ತಾ ಸಂಬಂಧ ಕಡಿದುಕೊಂಡಿದ್ದಾನೆ. ಆದರೆ ಈಕೆ ಬಿಡಲು ತಯಾರಿಲ್ಲ.' 'ಒಂದು ಹೆಣ್ಣು ಎತ್ತಿದ ದನಿ, ದೊಡ್ಡ ಫ್ಯಾಕ್ಟರಿ ಸಾವುಕಾರನನ್ನು